# ಚಿಂತನೆಗಳ ಬಾಗಿನ



ನಾ. ರೇವನ್

ಶ್ರಾವಣ ಸಂಭ್ರಮದಲ್ಲಿ ಹೊಸ ಅಂಕಣ, ಹೊಸ ಹೂರಣ, ಹೊಸ ಓರಣಗಳೊಡನೆ ಬಂದ ಆಗಸ್ಟ್ ತಿಂಗಳ 'ಮಯೂರ'ಕ್ಕೆ ಸಹೃದಯರ ಮೆಚ್ಚುಗೆ ಹರಿದುಬರುತ್ತಿದೆ. 'ಒಡನಾಟ' (ಬಿ.ಆರ್. ಲಕ್ಷ್ಮಣರಾವ್) ಅಂಕಣವನ್ನು ಕನ್ನಡ ಹೊಸಕಾವ್ಯ ಚಳವಳಿಯ ಚರಿತ್ರೆಯ ದಾಖಲೀಕರಣ ಎಂದು, 'ಕನಿಮೊಳಿ' (ಅಗ್ರಹಾರ ಕೃಷ್ಣಮೂರ್ತಿ) ಅಂಕಣವನ್ನು ಒಂದು ಸಾಮಾಜಿಕ ಮಹತ್ವದ ಬರಹ ಎಂದು ಓದುಗರು, ಸಾಹಿತಿಗಳು ಪ್ರಶಂಸೆ ಮಾಡಿದ್ದಾರೆ. ನಾಡಿನ ಹಲವೆಡೆಯಿಂದ ಬರುತ್ತಿರುವ ಸ್ಪಂದನ 'ಮಯೂರ'ದ ಸಾಂಸ್ಕೃತಿಕ ಜವಾಬ್ದಾರಿಯನ್ನು ಮತ್ತೆ ಮತ್ತೆ ನೆನಪಿಸುತ್ತಿದೆ. ಸಮಕಾಲೀನ ಸಂಕಥನಗಳ ಅಗತ್ಯಗಳನ್ನು ಕುರಿತು ಇನ್ನಷ್ಟು ಆಲೋಚಿಸುವಂತೆ ಮಾಡುತ್ತಿದೆ. ಇತಿಹಾಸ, ಸಾಹಿತ್ಯ, ಸಂಗೀತ, ರಂಗಭೂಮಿ, ಕಲೆ, ಮಾಧ್ಯಮ ಎಲ್ಲದರಲ್ಲೂ ಹೊಸ ಶೋಧನೆ– ಚಿಂತನೆಗಳ ಅಭಿವ್ಯಕ್ತಿಗೆ 'ಮಯೂರ'ವು ವೇದಿಕೆಯಾಗಬೇಕು ಎಂಬುದೇ ನಮ್ಮ ಆಶಯ.

ಕಲಾವಿದರಿಗೆ ಗಣಪತಿ ಎಂದರೆ ಅಪಾರ ವ್ಯಾಮೋಹ. ಅವರ ಕಟ್ಟಕ್ಕರೆಯ ವೈವಿಧ್ಯವನ್ನು ಪರಿಚಯಿಸುವ ಲೇಖನ ಗುಚ್ಛವಾದ 'ಗಜಮುಖನ ಬಹುಮುಖ' ಈ ಸಂಚಿಕೆಯ ವಿಶೇಷ. ಅಭಿಜಾತ ಕಲಾವಿದ ಜಿ.ಎಲ್.ಎನ್. ಸಿಂಹ ಅವರು ರಚಿಸಿದ 'ಗಣೇಶ ಪುರಾಣ'ದ ಆಯ್ದ ಕಥಾನಕಗಳ ಕೆಲವು ಅಪೂರ್ವ ಕಲಾಕೃತಿಗಳನ್ನು ಮೊದಲ ಬಾರಿಗೆ ಇಲ್ಲಿ ಪ್ರಸ್ತುತ ಪಡಿಸುತ್ತಿರುವ ಹೆಮ್ಮೆ ನಮ್ಮದಾಗಿದೆ. ಅಲ್ಲದೆ ಸಂಗೀತ, ಯಕ್ಷಗಾನ, ಚಿತ್ರಕಲೆಗಳಲ್ಲಿ ಗಣಪತಿಯ ಆವಾಹನೆಯನ್ನು ಕುರಿತು ಖ್ಯಾತ ಕಲಾವಿದರು ವಿವರಿಸಿದ್ದಾರೆ. ಜೊತೆಗೆ ಮಹಿಳಾ ಸಂಕುಲಕ್ಕೆ ದೇಸಿ ಸಾಂಸ್ಕೃತಿಕ ಮಾದರಿಯಾಗುವ ಗೌರಿಯ ಸ್ವಾಭಿಮಾನದ ಪರಿಚಯವೂ ಇಲ್ಲಿದೆ. 'ಗಜಮುಖನ ಬಹುಮುಖ' ಹಬ್ಬದ ಸಮಯಕ್ಕೆ ಹೊಸ ಬಗೆಯ ಬಾಗಿನ.

ಕನ್ನಡದ ಹಿರಿಯ ಸಾಹಿತಿ ಕೃಷ್ಣಮೂರ್ತಿ ಪುರಾಣಿಕರ ಜನ್ಮಶತಾಬ್ದಿ ಆರಂಭವಾಗಿದೆ. ಕಳೆದ ದಶಕಗಳಲ್ಲಿ ಅವರ ಹಲವಾರು ಕಥೆಗಳು 'ಮಯೂರ'ದಲ್ಲಿ ಪ್ರಕಟವಾಗಿ ಓದುಗರಿಗೆ ಸಂತಸ ನೀಡಿವೆ. ಅದರಲ್ಲಿ ಒಂದು ಕಥೆಯನ್ನು ಇಂದಿನ ಓದುಗರ ಸಲುವಾಗಿ ಮತ್ತೆ ಪ್ರಕಟಿಸುವ ಮೂಲಕ ಗೌರವ ಸಮರ್ಪಣೆ ಆಗಿದೆ.

ಜನಪ್ರಿಯ ಪರಂಪರೆಗಳು ಸೊರಗುತ್ತಿರುವ ದುರಂತದ ವಿಶ್ಲೇಷಣೆ ಈ ಬಾರಿಯ 'ವೇದಿಕೆ'ಯಲ್ಲಿದೆ. ಬಹುಮಾಧ್ಯಮದ ಸಂತೆಯಾಗಿರುವ ಈ ಕಾಲದಲ್ಲಿ ಜನಪ್ರಿಯ ಸಾಹಿತ್ಯ, ಸಂಗೀತ ಮುಂತಾದುವು ಕಣ್ಮರೆಯಾಗುತ್ತಿರುವ ಬಗ್ಗೆ ತಲ್ಲಣ ತಳಮಳ ಇದರಲ್ಲಿದೆ. 'ವೇದಿಕೆ'ಯಲ್ಲಿ ನಮಗೆ ಬಹಳ ಮುಖ್ಯ ಅನ್ನಿಸುವ ಆ ವಿಚಾರ ಚರ್ಚಿಸಬಹುದೇ, ಈ ಅನಿಸಿಕೆಯನ್ನು ಹಂಚಿಕೊಳ್ಳಬಹುದೇ ಎಂದು ಕೆಲವು ಚಿಂತಕರು, ಸಾಹಿತಿಗಳು ಕೇಳುತ್ತಿರುವುದು ಸಂತಸದ ಸಂಗತಿ. ಕೇಳುವುದೇಕೆ, 'ವೇದಿಕೆ' ಇರುವುದೇ ಅದಕ್ಕೆ, ತಡಮಾಡುವುದೇಕೆ!

'ಮಯೂರ'ದ ಹೆಜ್ಜೆಗಳಿಗೆ ನೀವು ಕೊಡುವ ತೆರೆದ ಮನದ ಗಮನ ಹೆಚ್ಚಿಸಲಿ ನಮ್ಮ ನಿಮ್ಮ ಅಕ್ಷರಾನುರಾಗದ ಬಂಧನ.

◆ ಆರ್. ಪೂರ್ಣಿಮಾ